**ದಿನಾಂಕಃ 27.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.

ಗುರುತಿನ ಚೀಟಿಯನ್ನು **ನಿಪಿ 16** ಎಂದು, ಕಂಪನಿಯ ಪರವಾಗಿ ನೀಡಿರುವ ಪತ್ರವನ್ನು **ನಿಪಿ 17(ಸದರಿ ದಾಖಲಾತಿಯಲ್ಲಿ ಪತ್ರವನ್ನು ಜಿ.ಜೆ ರಾಜಾ ಎಂಬುವವರು ನೀಡಿದ್ದು, ಅದರಲ್ಲಿ ಸಹಿಯನ್ನು ಹೊರತುಪಡಿಸಿ ಅವರ ಹುದ್ದೆ ನಮೂದು ಇರುವುದಿಲ್ಲ)** ಎಂದು, ವೇತನ ಪಟ್ಟಿಯನ್ನು **ನಿಪಿ 18** ಎಂದು ಗುರುತಿಸಲಾಯಿತು.

2ನೇ ಎದುರುದಾರರು ಏಕ ಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 1ನೇ ಎದುದಾರರ ಪರ ಮಾನ್ಯ ವಕೀಲರಿಂದ.

ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಆ ದಿನ ನನ್ನ ಗಂಡ ಹೋಗುತ್ತಿದ್ದ ವಾಹನ ಅವರಿಗೆ ಸೇರಿದ್ದು. ನನ್ನ ಗಂಡನಿಗೆ ಚಾಲನಾ ಪರವಾನಗಿ ಇದ್ದು, ಅದನ್ನು ಹಾಜರುಪಡಿಸಿಲ್ಲ ಮತ್ತು ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ವಾಹನಕ್ಕೆ ವಿಮೆ ಇದ್ದು, ಅದನ್ನು ಹಾಜರಪಡಿಸಿಲ್ಲ ಮತ್ತು ಮುಂದಿನ ದಿನಾಂಕದಂದು ಹಾಜರುಪಡಿಸಲು ತೊಂದರೆ ಇಲ್ಲ. ಯಾವ ಕಂಪನಿಯಿಂದ ವಿಮೆ ಪಡೆಯಲಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ವಾಹನಕ್ಕೆ ಸಂಬಂಧಿಸಿದ ವಿಮಾ ಕಂಪನಿಯಿಂದಲೂ ಪರಿಹಾರ ಕೋರಿದ್ದೇವೆ ಎಂದರೆ ಸರಿಯಲ್ಲ. ನನ್ನ ಗಂಡನ ವಾಹನದ ವಿಮಾ ಕಂಪನಿಯಿಂದ ನೀಡಿದ ಪಾಲಿಸಿಯಲ್ಲಿಯೂ ಸಹ ಪರಿಹಾರ ದೊರೆಯುತ್ತದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ನನ್ನ ಗಂಡನ ವಾಹನದ ವಿಮಾ

ಕಂಪನಿಯಿಂದ ವಯಕ್ತಿಕ ಅಪಘಾತದ ವಿಮೆಯಿಂದ ಪರಿಹಾರ ಪೆಡದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ತಮಿಳುನಾಡಿನ ವಿಶ್ವವಿದ್ಯಾನಿಲಯದ ಪಿ.ಎಂ.ಸಿ ಕಾಲೇಜಿನಲ್ಲಿ ಎಂ.ಬಿ.ಎ ವ್ಯಾಸಂಗ ಮಾಡಿದ್ದರು. ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿರುವ ನೌಕರರಿಗೆ ಸಮೂಹ ವಿಮೆ ಇತ್ತೋ, ಇಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಚಾರವಾಗಿ ಕಂಪನಿಯಲ್ಲಿ ಮಾಹಿತಿ ಪಡೆದು ತಿಳಿಸಲು ತೊಂದರೆ ಇಲ್ಲ. ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯ ಪರಿಹಾರವಾಗಿ ರೂ.2,00,000/- ಗಳನ್ನು ನೀಡಿರುತ್ತಾರೆ. ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯವರನ್ನು ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ. ನನ್ನ ಗಂಡನ ಕೆಲಸ ಮತ್ತು ಆದಾಯದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 11 ರಿಂದ 14 ಮತ್ತು 16 ರಿಂದ 18 ಅನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಗಂಡನ ಚಿಕಿತ್ಸೆಗೆ ಮತ್ತು ಇತರೆ ಖರ್ಚುಗಳಿಗೆ ನಾನು ಹೇಳಿರುವಷ್ಟು ಹಣವನ್ನು ವ್ಯಯಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ನನ್ನ ಗಂಡನಿಗೆ 45ಕ್ಕಿಂತಲೂ ಹೆಚ್ಚಿನ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಬಿ.ಎಸ್ಸಿ ವ್ಯಾಸಂಗ ಮಾಡಿರುತ್ತೇನೆ. ನಾನು ಗೃಹಿಣಿ. ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಕೆಲಸ ನೀಡುವಂತೆ ನಾನು ಅರ್ಜಿ ನೀಡಿಲ್ಲ. ಅನುಕಂಪದ ಆಧಾರದ ಮೇರೆಗೆ ನೌಕರಿ ನೀಡುವ ಸೌಲಭ್ಯ ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ

ಇದೆ ಎಂದರೆ ಸರಿಯಲ್ಲ. ನನ್ನ ಗಂಡ ಆದಾಯ ತೆರಿಗೆ ಪಾವತಿದಾರನಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**